ಕರ್ನಾಟಕ ಸರಕಾರ

# ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ,

ಕಾರ್ಯದರ್ಶಿಗಳ ಕಾರ್ಯಾಲಯ, ಚಾಮುಂಡಿಬೆಟ್ಟ, ಮೈಸೂರು-570010

ದೂರವಾಣಿ ಸಂಖ್ಯೆ :0821-2590027 ಇ–ಮೇಲ್ :eochamunditemple@gmail.com

ಪತ್ರ ಸಂಖ್ಯೆ:SCKDA( )ಸಿಆರ್: /2026-27 ದಿನಾಂಕ:22 /06/2026

## ಅಲ್ಪಾವಧಿ ಇ ಟೆಂಡರ್ ಪ್ರಕಟಣೆ

ಚಾಮುಂಡಿಬೆಟ್ಟ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಜರುಗಲಿರುವ 2026 ನೇ ಸಾಲಿನ ಆಷಾಢ ಶುಕ್ರವಾರಗಳು, ಶನಿವಾರ, ಭಾನುವಾರ ಮತ್ತು ಅಮ್ಮನವರ ವರ್ಧಂತಿ ದಿನ ಆಗಮಿಸುವ ಭಕ್ತಾಧಿಗಳಿಗೆ ರೂ.2000 ಟಿಕೆಟ್ ಪಡೆದ ಭಕ್ತಾಧಿಗಳಿಗೆ ನೀಡಲು ಗಾಜಿನ ನೀರಿನ ವಾಟರ್ ಬಾಟೆಲ್ ಸರಬರಾಜು ಮಾಡಲು ಟೆಂಡರ್ ಕರೆಯಲಾಗಿದೆ. ಆಸಕ್ತರು ಟೆಂಡರ್ ಗಳನ್ನು ಇ-ಪ್ರಕ್ಯೂರ್ಮೆಂಟ್(http://kppp.Karnataka.gov.in) ಮೂಲಕ ಸಲ್ಲಿಸಬಹುದಾಗಿದೆ. ಟೆಂಡರ್ ದಾಖಲೆಗಳಲ್ಲಿ ತಿಳಿಸಿರುವಂತೆ (Technical Bid,/ Qualification Criteria)ದ ಮೂಲಕ ಎಲ್ಲಾ ಅಗತ್ಯ ದಾಖಲೆಗಳನ್ನುಸಲ್ಲಿಸುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯಿಂದ ಹಾಗೂ ದೂರವಾಣಿ ಮೂಲಕ ಮಾಹಿತಿ ಪಡೆಯಬಹುದಾಗಿದೆ. ಮಾಹಿತಿಯು ಕೆಳಕಂಡಂತೆ ಇರುತ್ತದೆ. ಇ.ಎಂ.ಡಿ ಟೆಂಡರ್ ನ್ಯಾಯ ಮಾನ್ಯತಾ ಅವಧಿಗಿಂತ (Validity Period)45 ನಂತರ ವರೆಗೆ ಮಾನ್ಯತೆ ಇರತಕ್ಕದ್ದು.

| ಕ್ರಸಂ | ಟೆಂಡರ್ವಿವರ | ಅಂದಾಜು ಮೊತ್ತ (ರೂ.ಗಳಲ್ಲಿ) | ಇಎಂಡಿಮೊತ್ತ (ರೂ.ಗಳಲ್ಲಿ) |
|---|---|---|---|
| 1 | 500 ML ಕಸ್ಟಮೈಸ್ಡ್ ಗಾಜಿನ ವಾಟರ್ ಬಾಟೆಲ್ ಸರಬರಾಜು ಮಾಡುವ ಟೆಂಡರ್ (25,000 qty) | 10,00,000 | 20,000 |

ಇ-ಪ್ರಾಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಶೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿದೆ.

| ಕ್ರಸ | ವಿವರ | ದಿನಾಂಕಗಳು (1ರಿಂದ 5) | ಸಮಯ |
|---|---|---|---|
| 1. | ಇ-ಪೋರ್ಟಲ್‌ನಲ್ಲಿಟೆಂಡರ್ ದಾಖಲೆಗಳು ಚಾಲ್ತಿಗೆಬರುವುದು | ದಿ:22/06/2026 | ರ ಸಂಜೆ 5-00 ಗಂಟೆಯ ನಂತರ |
| 2 | ಟೆಂಡರ್ ಡೌನ್‌ಲೋಡ್ ಮಾಡಲು ಮತ್ತು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ ಮತ್ತು ಸಮಯ. | ದಿ:30/06/2026 | ರ ಸಂಜೆ 5-00 ಗಂಟೆ ವರೆಗೆ |
| 2. | ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ: | ದಿ:02/07/2026 | ರ ಸಂಜೆ 5-00 ಗಂಟೆ ವರೆಗೆ |
| 3. | ಹಣಕಾಸಿನ ಟೆಂಡರ್‌ನ್ನು ತೆರೆಯುವ ದಿನಾಂಕ : | ದಿ:03/07 /2026 | ಬೆಳಿಗ್ಗೆ 11 ಗಂಟೆ ನಂತರ |

## Specifications

| SL NO | Particular | Details |
|---|---|---|
| 01 | Container Type | Glass |
| 02 | Capacity | 500 ml |
| 03 | Label | Custmised |
| 04 | Water type | alkaline |

| SL NO | QTY | Rate | Total Rs. |
|---|---|---|---|
| 1 | 25,000 | 40 | 10,00,000 |

# <u>ಸಾಮಾನ್ಯ ಷರತ್ತುಗಳು</u>

| | |
|---|---|
| 1 | ಟೆಂಡರ್ ನ ಅಂದಾಜು ಮೊತ್ತಕ್ಕೆ ಶೇ.2 ರಂತೆ ಇ.ಎಂ.ಡಿ. ಮೊತ್ತವನ್ನು ಇ–ಪೇಮೆಂಟ್ ಮೂಲಕ ಇ–ಪ್ರೋಕ್ಯರ್‌ಮೆಂಟ್ ಪೋರ್ಟಲ್ ಮುಂಖಾಂತರ ಸಲ್ಲಿಸತಕ್ಕದ್ದು. ಇ,ಎಂ,ಡಿ ವಿನಾಯಿತಿ ಪಡೆಯಲಿಚ್ಚಿಸುವವರು ಎಂ,ಎಸ್,ಎಂ,ಇ ಪ್ರಮಾಣ ಪತ್ರವನ್ನು ಸಲ್ಲಿಸಬೇಕಿರುತ್ತದೆ ಹಾಗೂ ಚಾಲ್ತಿಯಲ್ಲಿರಬೇಕು ಮತ್ತು ಅದರಲ್ಲಿ ನೀರಿನ ಬಾಟಲ್ ಸರಬರಾಜು ಮಾಡಲು ಪಡೆದಿರುವ ಬಗ್ಗೆ ಸ್ಪಷ್ಟವಾಗಿರಬೇಕು ಇಲ್ಲವಾದಲ್ಲಿ ಅಂತಹ ಬಿಡ್ಡುದಾರರನ್ನು ತಿರಸ್ಕರಿಸಲಾಗುವುದು. |
| 2 | ಟೆಂಡರ್ ನಲ್ಲಿ ನಮೂದಿಸುವ ದರವು ಎಲ್ಲಾ ತೆರಿಗೆಗಳು, ಸಾಗಾಟ ಖರ್ಚು ಸೇರಿರತಕ್ಕದ್ದು. ಸಾಗಾಣಿಕಾ ವೆಚ್ಚವನ್ನು ಪ್ರತೇಕವಾಗಿ ನೀಡುವುದಿಲ |
| 3 | ಯಶಸ್ವಿ ಟೆಂಡರ್‌ದಾರರು ಸರಬರಾಜು ಆದೇಶ ಪಡೆದ ನಂತರ ಇಂಡೆಂಟ್ ನೀಡಿದ ಪ್ರಕಾರವೇ ಸರಬರಾಜು ಮಾಡುವುದು |
| 4 | ಸರಬರಾಜು ಮಾಡುವ ಗಾಜಿನ ನೀರಿನ ಬಾಟಲ್ ಗಳು ಪ್ರಾಧಿಕಾರ ಅಧಿಕಾರಿಗಳು ಸೂಚಿಸಿರುವ ಮಾದರಿಯಲ್ಲಿರತಕ್ಕದ್ದು, ಮಾದರಿಯನ್ನು ದೇವಾಲಯದ ಕಛೇರಿಯಲ್ಲಿ ಬಂದು ಪರಿಶೀಲಿಸಬಹುದು. ಹಾಗೂ ಬಾಟಲ್ ಮೇಲ್ಭಾಗದಲ್ಲಿ ಪ್ರಾಧಿಕಾರದ ಲೋಗೋವನ್ನು ಮುದ್ರಿಸಬೇಕು. |
| 5 | ಸರಬರಾಜು ಮಾಡುವಾಗ ಬಾಟಲ್ ಗಳು ಡ್ಯಾಮೇಜ್ ಆದಲ್ಲಿ ಬದಲಿಗೆ ಬೇರೆ ಬಾಟಲ್ ಒದಗಿಸಲು ಸರಬರಾಜುದಾರರು ಬದ್ದರಾಗಿರತಕ್ಕದ್ದು. |
| 6 | ಸರಕಾರಕ್ಕೆ ಸಲ್ಲತಕ್ಕ ಯಾವುದೇ ರೀತಿಯ ತೆರಿಗೆ ಇತ್ಯಾದಿಗಳನ್ನು ಪಾವತಿ ಮಾಡಲು ಸರಬರಾಜುದಾರರೇ ಜವಾಬ್ದಾರರಾಗಿರುತ್ತಾರೆ. |
| 7 | ಯಾವುದೇ ಕಾರಣಕ್ಕೆ ಮುಂಗಡ ಪಾವತಿಗೆ ಹಾಗೂ ಟೆಂಡರ್ ದರಕ್ಕಿಂತ ಅಧಿಕ ಪಾವತಿಗೆ ಅವಕಾಶವಿರುವುದಿಲ್ಲ. ಕನಿಷ್ಠ ಟೆಂಡರ್ ದರ ಸೂಚಿಸಿದ ನಂತರ ಸರಬರಾಜು ಆದೇಶವನ್ನು ಪಡೆಯಲು ವಿಫಲರಾದರೆ ಅಥವಾ ಸರಬರಾಜು ಆದೇಶ ಪಡೆದ ನಂತರ ಟೆಂಡರ್ ಷರತ್ತುಗಳಂತೆ ಸರಬರಾಜು ಮಾಡಲು ವಿಫಲರಾದರೆ ಇ.ಎಂ.ಡಿ. ಮೊಬಲಗನ್ನು ಮುಟ್ಟುಗೋಲು ಹಾಕಿ ಶ್ರೀ ದೇವಾಲಯಕ್ಕೆ ಜಮೆ ಮಾಡಿಕೊಳ್ಳಲಾಗುವುದು ಹಾಗೂ ಸರಬರಾಜು ಆದೇಶವನ್ನು ರದ್ದುಪಡಿಸಿ ನಿಯಮಾನಸಾರ ಕ್ರಮ ಕೈಗೊಳ್ಳಲಾಗುವುದು. ಗುತ್ತಿಗೆ ಹಕ್ಕನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಥವಾ ದಿನಾಂಕ ಇತ್ಯಾದಿ ಯಾವುದೇ ಬದಲಾವಣೆ ಮಾಡುವ ಅಧಿಕಾರವನ್ನು ಕಾರ್ಯದರ್ಶಿಗಳು ಕಾಯ್ದಿರಿಕೊಂಡಿರುತ್ತಾರೆ. |
| 8 | ಯಶಸ್ವಿ ಬಿಡ್ಡುದಾರರು ಟೆಂಡರ್ ಅಂದಾಜು ಮೊತ್ತಕ್ಕೆ ಶೇ.5% ರಂತೆ ಭದ್ರತಾ ಠೇವಣಿ ಧನಾದೇಶ. ಡಿ.ಡಿ./ಬ್ಯಾಂಕ್ ಗ್ಯಾರಂಟಿ ನೀಡಬೇಕು. ಸದರಿ ಠೇವಣಿಯನ್ನು ಟೆಂಡರ್ ಅವಧಿ ಪೂರ್ಣಗೊಂಡ ನಂತರ ಯಾವುದೇ ಬಾಕಿ ಇಲ್ಲದೇ ಇರುವ ಬಗ್ಗೆ ಪರಿಶೀಲಿಸಿಕೊಂಡು ಬಡ್ಡಿರಹಿತವಾಗಿ ಹಿಂದಿರುಗಿಸಲಾಗುವುದು. |
| 9 | ಯಶಸ್ವಿಬಿಡ್ಡುದಾರರು ಟೆಂಡರ್ ಅಂಗೀಕಾರವಾದ 8 ದಿನದೊಳಗಾಗಿ ಕರಾರು ಒಪ್ಪಂದಕ್ಕೆ ಸಹಿಮಾಡಿಕೊಡತಕ್ಕದ್ದು, ತಪ್ಪಿದಲ್ಲಿ ಟೆಂಡರ್ ರದ್ದುಪಡಿಸಿ ಅವರ ಭದ್ರತಾ ಠೇವಣಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು. |
| 10 | ಹಣಕಾಸಿನ ಬಿಡ್ಡಿನಲ್ಲಿ ( Financial bid) **ಒಂದಕ್ಕಿಂತಲೂ ಹೆಚ್ಚಿನ ಬಿಡ್ಡುದಾರರು ಒಂದೇ ದರವನ್ನು ನಮೂದಿಸಿದಲ್ಲಿ ಅಂತಿಮ ಆಯ್ಕೆಯನ್ನು ಪ್ರಾಧಿಕಾರದ ಕಾರ್ಯದರ್ಶಿಗಳು ಕಾಯ್ದಿರಿಸಿಕೊಂಡಿರುತ್ತಾರೆ..** |

ಸಹಿ/-
ಕಾರ್ಯದರ್ಶಿ
ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಚಾಮುಂಡಿಬೆಟ್ಟ

## ತಾಂತ್ರಿಕ ಬಿಡ್ ಗೆ ಸಲ್ಲಿಸಬೇಕಾದ ದಾಖಲೆಗಳು

| ಕ್ರಸಂ | ದಾಖಲೆಯ ವಿವರ | | |
|---|---|---|---|
| 01 | **UDYAM Certificate** | | |
| 02 | **MSME Certificate** | | |
| 03 | **ISO Certificate** | | |
| 04 | FSSAI Certificate | | |
| 05 | Lab Reports | | |
| 06 | ಆಧಾರ್ ಕಾರ್ಡ್ ಪ್ರತಿ ಅಪ್ಲೋಡ್ ಮಾಡಬೇಕು | | |
| 07 | ವ್ಯಕ್ತಿ /ಸಂಸ್ಥೆಯ ಪಾನ್ ಕಾರ್ಡ್ ಅಪ್ ಲೋಡ್ ಮಾಡುವುದು | | |
| 08 | ಸರಕು ಮತ್ತು ಸೇವಾ ತೆರಿಗೆ ( ಜಿ.ಎಸ್.ಟಿ) 2017 ರಡಿ ನೊಂದಣಿ ಪ್ರಮಾಣ ಪತ್ರ ಅಪ್ಲೋಡ್ ಮಾಡಬೇಕು. | **ಸರ್ಟಿಫಿಕೆಟ್** | |
| | | **GSTR-3B May26** | |
| 09<br>10 | ವೃತ್ತಿ ತೆರಿಗೆ ನೊಂದಣಿ ಪ್ರಮಾಣ ಪತ್ರ ಹಾಗೂ 2025–26ನೇ ಸಾಲಿನ ವೃತ್ತಿ ತೆರಿಗೆ ಪಾವತಿ ರಶೀತಿ ಮತ್ತು ಬೇಬಾಕಿ ಪ್ರಮಾಣ ಪತ್ರ | **ಸರ್ಟಿಫಿಕೆಟ್** | |
| | | 2025–26 ರಶೀದಿ | |
| 11<br>12 | **ಆದಾಯ ತೆರಿಗೆ ರಿಟರ್ನ ಸಲ್ಲಿಸಬೇಕಾದ ದಾಖಲೆ ಪ್ರತಿ. 2022-23 ರಿಂದ 2024-25ನೇ ಸಾಲಿನವರೆಗೆ 3 ವರ್ಷಗಳ ಬ್ಯಾಲೆನ್ಸ್ ಶೀಟ್ ಅಪ್ಲೋಡ್ ಮಾಡಬೇಕು** | Profit and Loss and Balance Sheet with UDIN | |
| | | ITRV Copy | |
| 13 | ಸರ್ಕಾರಿ ಸಂಸ್ಥೆಗಳು ಅಥವಾ ಮುಜರಾಯಿ ಇಲಾಖೆಯ ಗ್ರೇಡ್ – ಎ ದೇವಾಲಯಗಳಿಗೆ ಸರಬರಾಜು ಮಾಡಿರುವ ಬಗ್ಗೆ ಕನಿಷ್ಟ 1 ವರ್ಷದ ಅನುಭವ ಪ್ರಮಾಣ ಪತ್ರ ಸಲ್ಲಿಸುವುದು. | | |
| 14 | ಕಳೆದ 5 ವರ್ಷಗಳಲ್ಲಿ ಕನಿಷ್ಟ 3 ವರ್ಷಗಳಲ್ಲಿ ಟೆಂಡರ್ ಅಂದಾಜು ಮೊತ್ತಕ್ಕೆ ಶೇ.50 ರಂತೆ ಟರ್ನ್ ಓವರ್ ಮಾಡಿರುವ ಬಗ್ಗೆ ಲೆಕ್ಕ ಪರಿಶೋಧಕರು ನೀಡಿರುವ ಟರ್ನ್ ಓವರ್ ಸರ್ಟಿಫಿಕೆಟ್ ಸಲ್ಲಿಸುವುದು | | |
| 15 | ಅರ್ಜಿ ಸಲ್ಲಿಸುವ ಟೆಂಡರ್ ದಾರರು ವಹಿವಾಟು ನಡೆಸುತ್ತಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ಕ್ರಿಮಿನಲ್ ಅಥವಾ ಅಗತ್ಯ ವಸ್ತುಗಳ ಕಾಯಿದೆ 1955 ರಡಿ ಯಲ್ಲಿ ಮೊಕದ್ದಮ್ಮೆ ಇಲ್ಲ ಹಾಗೂ ಕಪ್ಪುಪಟ್ಟಿಗೆ ಸೇರಿಲ್ಲವೆಂಬ ಬಗ್ಗೆ ಸ್ವಯಂ ಘೋಷಣಾ ಪತ್ರವನ್ನು ಸಲ್ಲಿಸುವುದು ರೂ.100 ಗಳ ಸ್ಟಾಂಪ್ ಪೇಪರ್ ನಲ್ಲಿ ಕಾರ್ಯದರ್ಶಿಗಳ ಹೆಸರಿನಲ್ಲಿ ಪಡೆದು ಸಲ್ಲಿಸುವುದು | | |
| 16 | ಉತ್ತಮ ಗುಣಮಟ್ಟದ ನೀರಿನ ಬಾಟಲ್ ಗಳನ್ನು ಸರಬರಾಜು ಮಾಡುತ್ತೇವೆ ಎಂಬ ಬಗ್ಗೆ ರೂ.100 ಗಳ ಬಾಂಡ್ ಪೇಪರ್ ನಲ್ಲಿ ದೃಢೀಕರಣ ಸಲ್ಲಿಸುವುದು. | | |
| 17 | ಬಿಡ್ಡುದಾರರು ಸ್ವಂತ/ ಬಾಡಿಗೆ ಕರಾರು ವಾಹನಕ್ಕೆ ಸಂಬಂಧಪಟ್ಟ ದಾಖಲೆಗಳು ಚಾಲ್ತಿಯಲ್ಲಿರಬೇಕು. ಇದಕ್ಕೆ ಸಂಬಂಧ ಪಟ್ಟ ದಾಖಲೆಯನ್ನು ಅಪ್ ಲೋಡ್ ಮಾಡುವುದು. | RC | |
| | | FC | |
| | | Insurance | |
| 18 | ಎಲ್ಲಾ ದಾಖಲೆಗಳನ್ನು ಸಲ್ಲಿಸಿರುವ ಬಗ್ಗೆ ಚೆಕ್ ಲಿಸ್ಟ್ ಹಾಕುವುದು | | |

ತಾಂತ್ರಿಕ ಬಿಡ್ ಗೆ ಸಂಬಂಧಿಸಿದಂತೆ ವಿಶೇಷ ಸೂಚನೆ:–

- ಮೇಲ್ಕಂಡ ಎಲ್ಲಾ ಬಗೆಯ ದಾಖಲಾತಿಗಳನ್ನು ಮಾತ್ರ ಒಂದು PDF / Zip File Formateನಲ್ಲಿ ಮಾತ್ರ ಅಪ್ ಲೋಡ್ ಮಾಡಬೇಕು. ಅನಗತ್ಯ ದಾಖಲೆಗಳನ್ನು ಸಲ್ಲಿಸಬಾರದು. ಅನಾವಶ್ಯಕ ದಾಖಲೆಗಳನ್ನು ಸಲ್ಲಿಸಿದರೆ ಅಂತಹ ಬಿಡ್‌ದಾರರನ್ನು ತಿರಸ್ಕರಿಸಲಾಗುವುದು.

ಕಾರ್ಯದರ್ಶಿ
ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ
ಚಾಮುಂಡಿಬೆಟ್ಟ